ನೆಲಮಂಗಲದ ಬಳಿ, ಕುಣಿಗಲ್ಲಿಗೆ ಹೋಗುವ ದಾರಿಯಲ್ಲಿ ಎರಡು ಮೈಲು ದಾಟಿದ್ದೇ, ಎಡಕ್ಕೆ ಹೊರಳುವ ಕಡಿದಾದ ದಾರಿಯಲ್ಲೊಂದು ಫರ್ಲಾಂಗು ಕ್ರಮಿಸಿದರೆ ಬಲಕ್ಕೆ, ಆರ್ಥರ್ ಡೇವಿಡ್ ಹ್ಯೂಸ್‌ನ ಎರಡೆಕರೆಯುಳ್ಳ ಫಾರ್ಮು 'ಗ್ರೀನ್ ಹ್ಯೂಸ್' ಅಂತೆಂಬ ಫಲಕದೊಟ್ಟಿಗೆ ಎದುರಾಗುತ್ತದೆ. ಗೇಟು ದಾಟಿ ಒಳಸಾಗುವ ಕಲ್ಲುಮಣ್ಣಿನ ಓಣಿಯೋಪಾದಿಯ ರೋಡಿನಲ್ಲಿ ಐವತ್ತು ಮೀಟರಿಗೆಲ್ಲ 'ಥಾಪಸೆ ಅಸೋಸಿಏಟ್ಸ್' ಡಿಸೈನುಗೈದ, ಅಂತಂದರೆ ರುದ್ರನೀಲ ಥಾಪಸೆಯ ಬುದ್ಧಿಮತ್ತೆಯೂ ರೇಣುಯುಕ್ತಿಯ ವ್ಯವಹಾರ ಚಾತುರ್ಯವೂ ಒಡಗೂಡಿ ಮೇಳಯಿಸಿದ ಎರಡು ಕೋಣೆಗಳ ಪುಟ್ಟನೆ ಮನೆ ಮೈದೋರಿಬರುತ್ತದೆ. ಸರಿಸುಮಾರು ಕಟ್ಟಿಗೆಯನ್ನು ಬಳಸಿ ಕಟ್ಟಿದ ಮನೆ ಅದು. ಜಮೀನುತಲದಿಂದ ಎಂಟೊಂಬತ್ತು ಅಡಿ ಮೇಲಕ್ಕೆ, ತನ್ನ ಒಳನೆಲವಿಟ್ಟುಕೊಂಡು, ಆಲ್ಮೋಸ್ಟ್ ಆಕಾಶದಲ್ಲಿಯೇ ಉಪ್ಪರಿಗೆಯ ಹಾಗೆ ಅಥವಾ ತೊಟ್ಟಿಲಿನ ಹಾಗೆ ತೂಗುವ ವಿನ್ಯಾಸ. ಕೆಳಗಿನಿಂದ ಆ ಎತ್ತರವನ್ನೇರಲಿಕ್ಕೆ ಕಟ್ಟಿಗೆಯಲ್ಲಿಯೇ ಉಂಟಾದ ಏಣಿಯಂತಲ್ಲದ, ಆದರೆ ಏಣಿಯೇ ಅನ್ನಬಹುದಾದ ಸೋಪಾನ... ನೋಡಿದರೆ, ಹಾಲಿವುಡ್ ಸಿನಿಮಾಗಳಲ್ಲಿ ತೋರುವ 'ರಾಂಚ್' ಅನ್ನಿಸಬೇಕು, ಅಂತಹ ಆವರಣ! ವಾಸ್ತವದಲ್ಲಿ, ಸದರಿ ವಿನ್ಯಾಸವನ್ನು 'ಕುಟೀರ' ಅಂತನ್ನಬಹುದು. ಹುಲ್ಲುಹೊಚ್ಚಿದ ಸೂರು. ಕಟ್ಟಿಗೆಯ ನೆಲ. ಗೋಡೆಗಳೂ ಒನ್ನಮೂನೆ ಮರಮುಟ್ಟಿನದೇನೇ. 'ನನಗಿದನ್ನು ಕುಟೀರ ಅಂತ ಈ ನೆಲದ ಭಾಷೆಯಲ್ಲಿ ಕರೆಯೋದೇ ಹೆಚ್ಚು ಚೆನ್ನನಿಸುತ್ತೆ... ಇಲ್ಲದಿದ್ದರೆ, ಅಷ್ಟು ದೂರದ ಕಡಲು ದಾಟಿಕೊಂಡು ಈ ಮಣ್ಣಿಗೆ, ಇಲ್ಲಿನ ಆಕಾಶಕ್ಕೆ ಗಾಳಿಗೆ ಮೋಡಿಗೊಂಡು ಬರುತಿದ್ದೆನೆ?' ಅದೊಂದು ಸಂಜೆ, ಒಂದೆರಡು ಬಿಯರುಗಳ ನಡುವೆ, 'ಗ್ರೀನ್‌ಹ್ಯೂಸ್' ಫಾರ್ಮಿನಲ್ಲಿ, ರುದ್ರನೀಲ ಥಾಪಸೆಯ ಎದುರು ಕುಳಿತು ಆರ್ಥರ್ ಡೇವಿಡ್ ಹ್ಯೂಸ್ ಹೇಳಿದ್ದ. 'ನಿನ್ನನ್ನು ಈವರೆಗೆ ಕರೆತಂದಿದ್ದು ಯಾರು, ಮಿಸ್ಟರ್ ಹ್ಯೂಸ್? ಹವ್ವೆಟಾಲ್ ಯುವರ್ ಅಟ್ರ್ಯಾಕ್ಟೆಡ್ ಟು ದಿಸ್ ಪಾರ್ಟಾಫ್ ದಿ ವರ್ಲ್ಡ್?' ರುದ್ರನೀಲ ಥಾಪಸೆಯ ಪ್ರಶ್ನೆಗೆ, ಹ್ಯೂಸ್ ಕಿರುನಗೆ ತಾಳಿದ್ದ. 'ಯಾವುದೋ ಒಂದು ಕೊಳಲಿನ ನಾದ ನನ್ನನ್ನು ಇಲ್ಲಿವರೆಗೆ ಕರಕೊಂಡು ಬಂತು... ಅದೇನೂಂತ ಇಲ್ಲಿಗೆ ಬಂದ ಮೇಲಷ್ಟೇ ನನಗೆ ಗೊತ್ತಾಯಿತು. ನೀವು ಆ ಕೊಳಲನ್ನು ಕೃಷ್ಣ ಅಂತನ್ನುತ್ತೀರಿ... ನಾವು ಅದನ್ನೇ ಕ್ರೈಸ್ಟ್ ಅಂತನ್ನುತ್ತೀವಿ... ವ್ಯತ್ಯಾಸ ಅಷ್ಟೆ...' ಅಂತಂದು, ಬಲು ನಿಗೂಢವೆನಿಸುವ ಹಾಗೆ ಉತ್ತರಿಸಿದ್ದ. 'ಹವ್ವಬೌಟ್ ಯುವರ್ ಫ್ಯಾಮಿಲಿ?' ರುದ್ರನೀಲ ಥಾಪಸೆಯ ಈ ಪ್ರಶ್ನೆ, ನಿಜಕ್ಕೂ, ಹ್ಯೂಸ್‌ನನ್ನು ವಿಚಲಿತಗೊಳಿಸಿತ್ತು. 'ಓಹ್... ಕಮ್ಮಾನ್... ಬಿಟ್ಹಾಕಿ...' ಅಂತಂದು, ತೀರಾ ತೀರಾ ಕಸಿವಿಸಿಗೊಂಡು ಉತ್ತರಿಸಿದ್ದ, 'ಅದರ ಬಗ್ಗೆ ಹೇಳಿಕೊಳ್ಳೋ ಅವಶ್ಯಕತೆ ನನಗಿಲ್ಲ ಅನಿಸುತ್ತೆ... ಅಷ್ಟೇ ನೀನು ಆ ಕುರಿತು ತಿಳಕೊಳ್ಳೋ ಅಗತ್ಯವೂ ಇಲ್ಲ...' ಅಂತಂದು ಮಾತು ಮೊಟುಕಿದ್ದ.

ಆರ್ಥರ್ ಡೇವಿಡ್ ಹ್ಯೂಸ್‌ನ ಪ್ರಾಜೆಕ್ಟು ಮುಗಿದ ಮೇಲೆ, ಒಂದೆರಡು ಸರ್ತಿ ಮಾತ್ರ, ರುದ್ರನೀಲ ಥಾಪಸೆ ಆತನನ್ನು ಭೇಟಿ ಮಾಡಿದ್ದಿದೆ. ಆತ ವ್ಯಕ್ತಿಗತವಾಗಿ ಬಲು ಸ್ನೇಹದ ಮನುಷ್ಯ. ಎಲ್ಲರನ್ನೂ ಚೆನ್ನಾಗಿ ಒಳಗೊಂಡು ಮಾತನಾಡಿಸುವ ಆಸಾಮಿ. ಇಂಡಿಯಾದಲ್ಲಿ ಬಂದು ನೆಲೆಸಿದ ಮೇಲೆ, ಅವನೇ ಹೇಳಿಕೊಂಡ ಹಾಗೆ, ಇಲ್ಲಿನ ಮಣ್ಣು ಆಕಾಶ ಗಾಳಿ... ಇವುಗಳೇನು ಮೋಡಿಯೆಸಗಿದವೋ, ಅಥವಾ ಇಲ್ಲಿನ ಕೃಷ್ಣನ ಕೊಳಲ್ಲಿನದೇನೋ, ತೀರಾ ತೀರಾ ಸಂತನಂತಾಗಿಬಿಟ್ಟಿದ್ದ. ಶರಣಪ್ಪ ಅಂತೆಂಬ ಕನ್ನಡದ ಉತ್ತರಸೀಮೆಯ ಆಳೊಬ್ಬನನ್ನು